# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



# ತಗ್ಗಿಸಲ್ಪಡದ ಮನುಷ್ಯರು

ಬರಹಗಾರರು: Edward Hughes
ಚಿತ್ರಲೇಖಕರು: Jonathan Hay
ಅಳವಡಿಸುವವರು: Mary-Anne S.
ಪದ್ಮಾ ಸ್ಮೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ನೆಬೂಕದ್ನೆಚ್ಚರನು ದೊಡ್ಡದಾದ ಬಂಗಾರದ
ಪ್ರತಿಮೆಯನ್ನು ಮಾಡಿಸಿದನು. ಇದು ತಲೆಯಿಂದ
ಪಾದದವರೆಗೂ ಬಂಗಾರದಿಂದ ಕೂಡಿತ್ತು.
ಬಹುಶಃ ರಾಜನು ಕನಸನ್ನು ಮರೆತು
ತನ್ನ ಬಂಗಾರದ ರಾಜ್ಯವು ಅಳಿದು
ಹೋಗುವುದೇ ಇಲ್ಲವೆಂದು ದೇವರು
ಹೇಳಿ ಕಳುಹಿಸಿದ್ದಾನೆಂದುಕೊಂಡಿರಬಹುದು.
ನಾನು ಪ್ರತಿಮೆಯನ್ನು ಸಂಪೂರ್ಣವಾಗಿ
ಬಂಗಾರದಿಂದ ಮಾಡಿ ಸ್ಥಾಪಿಸಿದರೆ
ನಂತರ ದೇವರ ವಾಕ್ಯವು ಅವನ
ಕನಸಿನಲ್ಲಿ ನಿಜವಾಗುವುದಿಲ್ಲ
ಎಂಬುದಾಗಿ ಆಲೋಚಿರಬಹುದು.



ರಾಜನ ಸೇವಕರಲೊಬ್ಬನು ಎಲ್ಲಾ ಜನರಿಗೆ ಆಜ್ಞೆಯನ್ನು ಓದಿ ಹೇಳಿದನು. “ನೀವು ಬಂಗಾರದ ಪ್ರತಿಮೆಗೆ ಅಡ್ಡಬಿದ್ದು ಆರಾದಿಸಬೇಕು ... ಯಾರು ಅಡ್ಡಬಿದ್ದು ಆರಾದಿಸುವುದಿಲ್ಲವೋ ಅವರು ಉರಿಯುವ ಆವಿಗೆಯೊಳಗೆ ಹಾಕಲ್ಪಡುವನು” ಎಂಬುದಾಗಿ.



ಪ್ರತಿಯೊಬ್ಬರೂ ರಾಜನು ಆಜ್ಞಾಪಿಸಿದ ಹಾಗೆಯೇ ಮಾಡಿದರು ಆದರೆ ಮೂವರನ್ನು ಬಿಟ್ಟು. ಆ ಮನುಷ್ಯರೇ ಇಬ್ರಿಯರು, ಅವರೆ ಶದ್ರಕ, ಮೇಷಕ, ಅಬೇದ್ನಗೋ ದಾನಿಯೇಲನ ಸ್ನೇಹಿತರು. ದಾನಿಯೇಲನು ಆ ಸಮಯದಲ್ಲಿ ಅಲ್ಲಿರಲಿಲ್ಲವೆಂದು ಕಾಣುತ್ತದೆ. ಖಚಿತವಾಗಿ ಆತನೂ ಸಹ ಮನುಷ್ಯನು ಮಾಡಿದ ವಿಗ್ರಹಗಳಿಗೆ ಆರಾದಿಸುವುದನ್ನು ಹಗೆ ಮಾಡುತ್ತಿದ್ದನು.



ರಾಜನು ದಾನಿಯೇಲನನ್ನು ಅವನ ಸ್ನೇಹಿತರನ್ನು ಇಷ್ಟಪಡುತ್ತಿದ್ದಾನೆಂಬ ಕಾರಣಕ್ಕಾಗಿ ಅವರ ಮೇಲೆ ರಾಜನ ಪಂಡಿತರು ಅಸೂಯೆಗೊಂಡರು. "ರಾಜನೇ, ನೀನು ಬಾಬಿಲೋನಿನ ರಾಜ್ಯವನ್ನು ಆಳಲು ಇಟ್ಟಿರುವ ಶದ್ರಕ, ಮೇಷಕ್, ಅಬೇದ್ನೆಗೋ ಎಂಬ ದೊರೆಗಳಿದ್ದಾರಲ್ಲಾ ಆ ಮನುಷ್ಯರು, ನಿನಗೆ ವಿಧೇಯರಾಗುತ್ತಿಲ್ಲ. ಅವರು ನಿನ್ನ ದೇವರುಗಳನ್ನು ಸೇವಿಸುವುದಾಗಲಿ ನೀನು ನಿಲ್ಲಿಸಿದ ಪ್ರತಿಮೆಗಳನ್ನು ಪೂಜಿಸುವುದಿತ್ತಿಲ್ಲ" ಎಂದು ಹೇಳಿದರು.





ರಾಜನದ ನೆಬೂಕದ್ನೆಚ್ಚರನು ಬಹಳವಾಗಿ ಕೋಪಗೊಂಡಿದ್ದನು. “ನೀವು ಆರಾದಿಸದಿದ್ದರೆ, ಧಗಧಗನೆ ಉರಿಯುವ ಆವಿಗೆಯ ಮಧ್ಯದಲ್ಲಿ ತಳ್ಳಲ್ಪಡುವಿರಿ ಮತ್ತು ನಿಮ್ಮನ್ನು ನನ್ನ ಕೈಯಿಂದ ಯಾವ ದೇವರು ಬಿಡಿಸುತ್ತಾನೆ?” ಎಂದು ಎಚ್ಚರಿಕೆಯನ್ನು ಕೊಟ್ಟನು.

ರಾಜನು ಬಹುದೊಡ್ಡ ತಪ್ಪನ್ನು ಮಾಡುತ್ತಿದ್ದಾನೆ. ಆತನು ಜೀವಿಸುವ ದೇವರ ವಿರುದ್ಧ ಸವಾಲು ಮಾಡುತ್ತಿದ್ದಾನೆ. ಪ್ರತಿಮೆಯನ್ನು ಪೂಜಿಸುವುದು ದೇವರ ನಿಯಮಕ್ಕೆ ವಿರುದ್ಧವಾದದ್ದು ಎಂದು ಈ ಮೂವರು ಇಬ್ರಿಯರಿಗೆ ಗೊತ್ತಿತ್ತು. ಅವರು ಬಲವಾಗಿ ನಿಂತರು. ಯಾಕೆಂದರೆ ಅವರು ದೇವರನ್ನು ನಂಬಿದ್ದರಿಂದ ರಾಜನಿಗೆ ಹೆದರಲಿಲ್ಲ.



ಧೈರ್ಯಶಾಲಿಗಳಾದ ಈ ಮೂವರು ರಾಜನಿಗೆ ಉತ್ತರಕೊಟ್ಟರು. “ನಮ್ಮ ದೇವರು ಧಗಧಗನೆ ಉರಿಯುವ ಆವಿಗೆಯೊಳಗಿಂದ ಬಿಡಿಸುವನು, ಚಿತ್ತವಿಲ್ಲದಿದ್ದರೂ ರಾಜನೇ, ಇದು ನಿನಗೆ ತಿಳಿದಿರಲಿ ನಾವು ನಿನ್ನ ದೇವರುಗಳನ್ನು ಸೇವಿಸುವುದಾಗಲಿ, ನೀನು ನಿಲ್ಲಿಸಿದ ಬಂಗಾರದ ಪ್ರತಿಮೆಯನ್ನು ಪೂಜಿಸುವುದಾಗಲಿ ಮಾಡುವುದಿಲ್ಲ ಎಂದು ಹೇಳಿದರು.”



ರಾಜನಾದ

ನೆಬೂಕದ್ನೆಚ್ಚರನು

ಕೋಪೋದ್ರೇಕಗೊಂಡು

ಆವಿಗೆಯನ್ನು ನಿತ್ಯಕ್ಕಿಂತ

ಏಳರಷ್ಟು ಹೆಚ್ಚಾಗಿ

ಉರಿಸಬೇಕೆಂದು

ಆಜ್ಞಾಪಿಸಿದನು.

ಆದರೂ ಅವರು

ಮೊಣಕಾಲೂರಲಿಲ್ಲ.



ರಾಜನು ತನ್ನ ಸೈನ್ಯದ
ಕೆಲವು ಮಂದಿಶೂರರಿಗೆ
ಶದ್ರಕ್, ಮೇಷಕ್,
ಅಬೇದ್ನೆಗೋ
ಎಂಬುವವರನ್ನು



ಕಟ್ಟಿ
ಧಗಧಗನೆ
ಉರಿಯುವ
ಆವಿಗೆಯೊಳಗೆ ಎತ್ತಿ
ಹಾಕಬೇಕೆಂದು ಅಪ್ಪಣೆ ಕೊಟ್ಟನು.

ಆವಿಗೆಯ ಕಾವು ಅತೀ
ತೀಕ್ಷ್ಣವಾಗಿದ್ದದರಿಂದ
ಅಗ್ನಿಜ್ವಾಲೆಯು ಶದ್ರಕ್,
ಮೇಷಕ್, ಅಬೇದ್ನಗೋ
ಎಂಬುವವರನ್ನು
ಎತ್ತಿಹಾಕಿದವರನ್ನೇ
ಸಂಹರಿಸಿತು.



ರಾಜನು ಸ್ವಲ್ಪ ಅಂತರದಿಂದ ನೋಡಿದನು, ಆತನು ಈ ಮೂವರು ಧಗಧಗನೆ ಉರಿಯುವ ಆವಿಗೆಯ ಮಧ್ಯದಲ್ಲಿ ಇರುವುದನ್ನು ನೋಡಿದನು. ಆದರೆ ಆತನು ಅದನ್ನಷ್ಟೆ ನೋಡಿರಲಿಲ್ಲ.



ರಾಜನಾದ ನೆಬೂಕದ್ನೆಚ್ಚರನ್ನು ಬೆಚ್ಚಿಬಿದ್ದು ತಟ್ಟನೆದ್ದು ತನ್ನ ಮಂತ್ರಿಗಳಿಗೆ, ಕಟ್ಟಿದ ಮೂವರನ್ನು ನಾವು ಬೆಂಕಿಯೊಳಗೆ ಹಾಕಿಸಲಿಲ್ಲವೋ? ಎಂದು ಕೇಳಲು 'ಅರಸೇ, ಹೌದು ಸತ್ಯ ಎಂದು' ಉತ್ತರಕೊಟ್ಟರು. ಅದಕ್ಕೆ ರಾಜನು 'ಇಗೋ ಕಟ್ಟಿಲ್ಲದ ನಾಲ್ವರನ್ನು ನೋಡುತ್ತೇನೆ, ಬೆಂಕಿಯಲ್ಲಿ ತಿರುಗಾಡುತ್ತಿದ್ದಾರೆ. ಅವರಿಗೆ ಯಾವ ಹಾನಿಯೂ ಇಲ್ಲ, ನಾಲ್ಕನೆಯವನ ರೂಪವು ದೇವಕುಮಾರನ ರೂಪದಂತಿದೆ'ಎಂದು ಹೇಳಿದನು.



ರಾಜನು ಧಗಧಗನೆ ಉರಿಯುವ ಆವಿಗೆಯ ಬಾಯಿಯ ಬಳಿಗೆ ಹೋಗಿ ‘ಪರಾತ್ಪರ ದೇವರ ಸೇವಕರಾದ ಶದ್ರಕ್, ಮೇಷಕ್, ಅಬೇದ್ನೆಗೂ ಎಂಬುವರೇ ಬನ್ನಿ, ಹೊರಗೆ ಬನ್ನಿ’ ಎಂದು ಕೂಗಲು ಶದ್ರಕ್, ಮೇಷಕ್, ಅಬೇದ್ನೆಗೊ ಎಂಬುವರು ಬೆಂಕಿಯೊಳಗಿಂದ ಹೊರಟುಬಂದರು.



ಅದರ ಸುತ್ತಲೂ ಕೂಡಿದ್ದ ಪ್ರತಿಯೊಬ್ಬರೂ ಈ ಮೂವರು ಇಬ್ರಿಯರನ್ನು ಪರೀಕ್ಷಿಸಿದರು. ಅವರ ಮೇಲೆ ಬೆಂಕಿಯ ಅಧಿಕಾರವು ನಡೆದಿಲ್ಲ. ಅವರ ತಲೆಕೂದಲು ಸುಟ್ಟಿಲ್ಲ. ಅವರ ಶಲ್ಯಗಳಿಗೆ ವಿಕಾರವಿಲ್ಲ, ಬೆಂಕಿಯ ವಾಸನೆಯೇ ಮುಟ್ಟಿಲ್ಲ ಎಂದು ತಿಳಿದುಕೊಂಡರು.



ರಾಜನಾದ ನೆಬೂಕದ್ನೆಚ್ಚರನು ನಡೆದದ್ದನ್ನೂ ತಿಳಿದುಕೊಂಡಾಗ, “ಶದ್ರಕ್, ಮೇಷಕ್, ಅಬೇದ್ನೆಗೋ ಎಂಬುವರ ದೇವರಿಗೆ ಸ್ತೋತ್ರವಾಗಲಿ ಆತನು ತನ್ನ ದೂತನನ್ನು ಕಳುಹಿಸಿ ತನ್ನಲ್ಲಿ ಭರವಸೆಯಿಟ್ಟ ಸೇವಕರನ್ನು ಬಿಡಿಸಿದ್ದಾನಲ್ಲ” ಎಂದು ಪ್ರಾರ್ಥಿಸಿ ಹೇಳಿದನು.



# ತಗ್ಗಿಸಲ್ಪಡದ ಮನುಷ್ಯರು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ದಾನಿಯೇಲ 3**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16